O.S.44/2019

PW-1

ದಿ. 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-**

1. ದಾವಾ ಸ್ವತ್ತಿನ ಮೂಲ ಸರ್ವೆ ನಂಬರ್ 54/3 ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಸರ್ಕಾರಿ ಗೋಮಾಳ ಜಮೀನು ಎಂದರೆ ಸರಿ. ಸರ್ವೆ ನಂ.54/3 ರಲ್ಲಿ ಸುಮಾರು ನೂರಾರು ಎಕರೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂ.54/3 ರಲ್ಲಿ ಬಹಳಷ್ಟು ಜನರು ಜಮೀನುಗಳಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿ. ಈ ರೀತಿ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿರುವ ಜನರು ಆ ಜಮೀನುಗಳನ್ನು ತಮ್ಮ ಹೆಸರಿಗೆ ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅವರ ಅರ್ಜಿಗಳನ್ನು ಪರಿಶೀಲಿಸಿ ಸರ್ಕಾರವು ಜಮೀನುಗಳಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವವರ ಆಯಾ ಜಮೀನುಗಳಿಗೆ ಸಂಬಂಧಿಸಿದಂತೆ ಅವರವರ ಹೆಸರಿಗೆ ಮಂಜೂರಾತಿ ಪ್ರಮಾಣ ಪತ್ರದ ಅಡಿಯಲ್ಲಿ ಜಮೀನುಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ.

2. ಸರ್ವೆ ನಂ.54/3 ಪಿ ನಂಬರ್ ಆದ ಕಾರಣ ಆ ಜಮೀನಿನಲ್ಲಿ ಮಂಜೂರಾದ ಜಮೀನುಗಳಿಗೆ ಸಂಬಂಧಿಸಿದಂತೆ ಸ್ಕೆಚ್, ಪೋಡಿ ಮತ್ತು ದುರಸ್ತು ಇದುವರೆಗೂ ಆಗಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆಯೂ ಯಾವುದೇ ಸ್ಕೆಚ್, ಪೋಡಿ ಮತ್ತು ದುರಸ್ತು ಆಗ ಆಗಿರಲಿಲ್ಲ ಎಂದರೆ ಸಾಕ್ಷಿಯು ಮಂಜೂರಾಗುವುದಕ್ಕು ಮೊದಲು ಆಗಿರಲಿಲ್ಲ ನಮಗೆ ಮಂಜೂರಾದ ನಂತರ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮಗೆ ಮಂಜೂರಾದ ಜಮೀನಿಗೆ

ಸಂಬಂಧಿಸಿದಂತೆ ಮಂಜೂರಾತಿ ಪತ್ರದಲ್ಲಿ ಚಕ್ಕುಬಂದಿಯನ್ನು ತೋರಿಸಿರಲಿಲ್ಲ ಎಂದರೆ ಸರಿ. ಅದೇ ಪ್ರಕಾರ ಬೇರೆಯವರಿಗೆ ಮಂಜೂರಾತಿಯಾದ ಜಮೀನುಗಳಿಗೂ ಸಹ ಚಕ್ಕುಬಂದಿ ತೋರಿಸಿಲ್ಲ ಎಂದರೆ ಸರಿ.

3. ದಾವಾ ಸ್ವತ್ತು ನಮ್ಮ ತಂದೆಯವರ ಹೆಸರಿಗೆ ಮಂಜೂರಾದಂತಹ ಜಮೀನು ಎಂದರೆ ಸರಿ. ನಾನು ಈ ದಾವೆಯನ್ನು ಸರ್ವೆ ನಂ.131 ರ 2 ಎಕರೆ 4 ಗುಂಟೆಗೆ ಸಂಬಂಧಿಸಿದಂತೆ ಹೂಡಿರುತ್ತೇನೆ ಎಂದರೆ ಸರಿ. ಸರ್ವೆ ನಂ.54/3 ಎಂದು ಇದ್ದದ್ದು ನಂತರದಲ್ಲಿ ಸರ್ವೆ ನಂ.131 ಎಂದು ಆಗಿರುತ್ತದೆ ಎಂದು ತೋರಿಸಲು ನೀವು ಈ ದಾವೆಯಲ್ಲಿಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ದುರಸ್ತಿಯಾದ ದಾಖಲೆಯನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಯಾವುದೇ ವಿಸ್ತೀರ್ಣ ನಮೂದು ಆಗಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯವರ ಹೆಸರಿಗೆ ಮಂಜೂರಾಗಿದೆ ಹಾಗಾಗಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ರ ಪ್ರಕಾರ ಸರ್ವೆ ನಂ.131 ರಲ್ಲಿ 1 ಎಕರೆ 36 ಗುಂಟೆ ಜಮೀನು ಎಂದು ತೋರಿಸುತ್ತಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು 4 ಗುಂಟೆ ಖರಾಬು ಕಳೆದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-5 ರ ಪ್ರಕಾರ ನಾನು ಸರ್ವೆ ನಂ.131 ರಲ್ಲಿ 1 ಎಕರೆ 36 ಗುಂಟೆ ಜಮೀನು ನನಗೆ ಬರಬೇಕು ಎಂದು ಪ್ರತಿವಾದಿಗಳಿಗೆ ನೋಟೀಸು ಕೊಟ್ಟಿರುತ್ತೇನೆ ಎಂದರೆ ಸರಿ.

4. 2ನೇ ಪ್ರತಿವಾದಿಗೆ ಸರ್ವೆ ನಂ.54/ಪಿ9 ರಲ್ಲಿ 1 ಎಕರೆ 30 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜೂರಾತಿಯ ಆಧಾರದ ಮೇಲೆ 2ನೇ ಪ್ರತಿವಾದಿಯ ಹೆಸರಿಗೆ ಆ ಜಮೀನಿಗೆ ಸಂಬಂಧಿಸಿದಂತೆ ಎಂಆರ್ ನಂ.ಟಿ 8/2013-2014 ರಂತೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ಪ್ರಕಾರ ಸರ್ವೆ ನಂಬರ್ 54/ಪಿ9 ರಲ್ಲಿ 1ನೇ ಪ್ರತಿವಾದಿಗೂ ಸಹ 1 ಎಕರೆ 30 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. 2ನೇ

ಪ್ರತಿವಾದಿಗೆ ಮಂಜೂರಾದ 1 ಎಕರೆ 30 ಗುಂಟೆ ಸಂಪೂರ್ಣ ಜಮೀನಿನಲ್ಲಿ ಅವರೆ ಈಗಲೂ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಮಗೆ ಮಂಜೂರಾದ ಜಮೀನಿನಲ್ಲಿ ಶೋಭಾರಾಣಿ ಎನ್ನುವವರು ಅತಿಕ್ರಮಣ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಶೋಭಾರಾಣಿರವರ ತಂದೆ ಹೆಸರಿಗೂ ಜಮೀನು ಮಂಜೂರಾಗಿತ್ತು ಅದರಲ್ಲಿ ಅವರು ಇದ್ದಾರೆ ಎಂದು ನುಡಿಯುತ್ತಾರೆ. ನಮಗೆ ಮಂಜೂರಾದ ಜಮೀನಿನಲ್ಲಿ ಶೋಭಾರಾಣಿ ರವರು ಅತಿಕ್ರಮಿಸಿ ಸ್ವಾಧೀನಾನುಭವದಲ್ಲಿ ಇರುವುದರಿಂದ ನಾವು ಹೇಗಾದರೂ ಮಾಡಿ 2 ನೇ ಪ್ರತಿವಾದಿಗೆ ಸಂಬಂಧಿಸಿದ ಜಮೀನನ್ನು ಕಬಳಿಸಬೇಕೆಂದು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ನಮೂದಿಸಿದ ಚಕ್ಕುಬಂದಿಯು 1 ಎಕರೆ 36 ಗುಂಟೆ ಜಮೀನಿಗೆ ಸಂಬಂಧಿಸಿದ್ದು ಆಗಿರುತ್ತದೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.**

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .